# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೇಂಟ್\ಉಪಲೋಕ್\ಬಿಜಿಎಂ\1405\2019\ಎಆರ್ಇ–3

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 6/9/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಶ್ರೀ.ಸೋಮಲಿಂಗಪ್ಪ ಚನ್ನಬಸಪ್ಪ ಅಂಟರಟಾನಿ, ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಗರಗ, ಧಾರವಾಡ ತಾಲ್ಲೂಕು ಮತ್ತು ಜಿಲ್ಲೆ ಇವರು ಸರ್ಕಾರಿ ನೌಕರರಾಗಿ ಕರ್ತವ್ಯ ಲೋಪ/ ದುರ್ವರ್ತನೆ ಎಸಗಿರುವ ಬಗ್ಗೆ.

*****

ಶ್ರೀ.ಎಸ್.ಎಂ.ಪ್ರದೀಪ್ ಕುಮಾರ್, ನಂ.108, ಗುಬ್ಬಿಗೂಡು, 2ನೇ ಮಹಡಿ, ಪ್ರತಿಬಿಂಬ ಪ್ಲಾಟಿನಂ ಪೂರ್ವ, ಶ್ರೀ. ಜ್ಞಾನಾಕ್ಷಿ ವಿದ್ಯಾನಿಕೇತನ ಎದುರು, ತಿರುಚಿ ಮಹಾಸ್ವಾಮಿ ರಸ್ತೆ, ರಾಜರಾಜೇಶ್ವರಿ ನಗರ, ಬೆಂಗಳೂರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಸೋಮಲಿಂಗಪ್ಪ ಚನ್ನಬಸಪ್ಪ ಅಂಟರಟಾನಿ, ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಗರಗ, ಧಾರವಾಡ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ಇವರ ಮೇಲೆ ದೂರನ್ನು ನೀಡಿದ್ದುದನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿರುತ್ತದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ಎದುರುದಾರರು ಸಹಾಯಕ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಕಲಘಟಗಿಯಲ್ಲಿ ಕೆಲಸ ನಿರ್ವಹಿಸಿದ ಸಮಯದಲ್ಲಿ:

1) ಕಲಘಟಗಿ ತಾಲ್ಲೂಕಿನ ಜಲಾನಯನ ಯೋಜನೆಯಿಂದ IWMP, DPAP ಯೋಜನೆಗಳಲ್ಲಿ ಸಾಕಷ್ಟು ಅವ್ಯವಹಾರ ಮತ್ತು ಸರ್ಕಾರದ ಮಾರ್ಗಸೂಚಿಯನ್ನು ಉಲ್ಲಂಘಿಸಿ ಸರ್ಕಾರದ ಅನುದಾನವನ್ನು ದುರುಪಯೋಗ ಪಡಿಸಿಕೊಂಡ ಆಪಾದನೆ ಸಾಬೀತಾಗಿರುವುದರಿಂದ, ಸದರಿಯವರ ವಿರುದ್ಧ ಲೋಕಾಯುಕ್ತ ಸಂಸ್ಥೆಯಲ್ಲಿ ವಿಚಾರಣೆ ನಡೆಯುತ್ತಿದೆ. ಸಿ.ಸಿ.ಎ ನಿಯಮಗಳು 1957ರ ನಿಯಮ 14–ಎ ಅಡಿಯಲ್ಲಿ ದಿ:13/03/2017ರಂದು ಪ್ರಕರಣವನ್ನು

ಉಪಲೋಕಾಯುಕ್ತರಲ್ಲಿ ಮುಂದಿನ ವಿಚಾರಣೆಗೆ ಸರ್ಕಾರದ ಕೃಷಿ ಇಲಾಖೆಯು ರವರು ಆದೇಶ ಹೊರಡಿಸಿದ್ದು, ವಿಚಾರಣೆ ನಡೆಯುತ್ತಿದೆ;

2) ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಧಾರವಾಡ ನೊಂದಣಿ ಕಛೇರಿಯಿಂದ ಮಾಹಿತಿಯನ್ನು ಪಡೆದುಕೊಂಡು, ಅದರಂತೆ ಧಾರವಾಡ ತಾಲ್ಲೂಕಿನ ಕ್ಯಾರಕೊಪ್ಪ ಗ್ರಾಮ ಪಂಚಾಯಿತಿ ಹದ್ದಿನ ಅಡಿಯಲ್ಲಿ ಬರುವ ಚಿಕ್ಕಮಲ್ಲಿಗವಾಡ ಗ್ರಾಮದ ಜಮೀನುಗಳನ್ನು ಶ್ರೀಮತಿ ಬಾಲಾಬಾಯಿ ಕೋಂ ವೆಂಕನಗೌಡ ಪಾಟೀಲ ಅವರಿಂದ ದಿ:10.4.2003ರಂದು ಶ್ರೀಮತಿ ಪುಷ್ಪ ವಾಗೀಶ್ವರ ಹಂಚಿನ ಹಾಗೂ ಶ್ರೀಮತಿ ಸವಿತಾರಾಣಿ ಕೋಂ ಸೋಮಲಿಂಗಪ್ಪ ಅಂಟರತಾನಿ ಹೆಸರಿನಲ್ಲಿ ಒಟ್ಟು 14 ಎಕರೆ 6 ಗುಂಟೆ ಜಮೀನನ್ನು ನೋಂದಣಿ ಮಾಡಿಸಲಾಗಿದೆ. ಜಮೀನ ಮೌಲ್ಯಮಾಪನ ಕುರಿತಂತೆ ಪ್ರಕರಣ ದಾಖಲಾಗಿದ್ದು, ಮಾರುಕಟ್ಟೆ ಬೆಲೆಯಲ್ಲಿ ಪ್ರತಿ ಎಕರೆಗೆ ರೂ.40,000/- ತೀರ್ಮಾನಿಸಿ ದಿ:27/5/2005 ರಂದು ಆದೇಶ ಆಗಿರುತ್ತದೆ. ಎದುರುದಾರರು ಅವರ ಪತ್ನಿ ಸವಿತಾ ರಾಣಿ ಇವರ ಹೆಸರಿನಲ್ಲಿ 8 ಎಕರೆ 9 ಗುಂಟೆ ಖರೀದಿಸಿದ್ದಾರೆ. ಸವಿತಾ ರಾಣಿ, ಪುಷ್ಪ ಹಂಚಿನ ಅವರು ಜಿಲ್ಲಾ ನೊಂದಣಿ ಅದಿಕಾರಿಗಳ ನ್ಯಾಯಾಲಯದಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಲು ಸೋಮಲಿಂಗಪ್ಪ ಅವರಿಗೆ ಅಧಿಕಾರ ನೀಡಿದ್ದಾರೆ. ಪುಷ್ಪ ಕೂಡ ಸೋಮಲಿಂಗಪ್ಪ ಅವರ ಸಂಬಂಧಿಕರು ಆಗಿರುತ್ತಾರೆ. ಜಮೀನುಗಳನ್ನು ಶ್ರೀಮತಿ.ಸವಿತಾ ರಾಣಿ ಮತ್ತು ಪುಷ್ಪ ವಾಗೀಶ್ವರ ಹಂಚಿನ ಅವರ ಹೆಸರಿನಲ್ಲಿ ಖರೀದಿಸಿರುವುದರಿಂದ ರೂ.6 ಲಕ್ಷ ಹೂಡಿಕೆ ಮಾಡಿ ಬೇನಾಮಿ ಆಸ್ತಿ ಖರೀದಿಸಿರುತ್ತಾರೆ. ಎದುರುದಾರರು ದಿ:10/10/2003ರಂದು ಚಿಕ್ಕಮಲ್ಲಿಗವಾಡ ಬ್ಲಾಕ್ ನಂ.201ರ ಪೈಕಿ 1 ಎಕರೆ 16 ಗುಂಟೆ ಜಮೀನನ್ನು ಮತ್ತು ಧಾರವಾಡ ವಾರ್ಡ್ ನಂ.1, ರಾಣಿ ಚೆನ್ನಮ್ಮನಗರ, ಮನೆ ನಂ.183 ಸ್ವತ್ತನ್ನು ತಮ್ಮ ಪತ್ನಿಯವರ ಹೆಸರಿನಲ್ಲಿ ಖರೀದಿಸಿದ್ದು, ಒಟ್ಟು 17 ಎಕರೆ 34 ಗುಂಟೆ ಆಸ್ತಿಯನ್ನು ಬೇನಾಮಿಯಾಗಿ ಖರೀದಿಸಿರುತ್ತಾರೆ. ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

3. ಎದುರುದಾರರು ತಮ್ಮ ತಕರಾರನ್ನು ಸಲ್ಲಿಸಿದ್ದು, ತಮ್ಮ ತಕರಾರಿನಲ್ಲಿ ದಿ:10/12/1997ರಂದು ಕೃಷಿ ಇಲಾಖೆಯಲ್ಲಿ ಕೃಷಿ ಅಧಿಕಾರಿಯಾಗಿ ಸೇವೆಗೆ ಸೇರಿರುತ್ತೇನೆ. ಸವಿತಾ ರಾಣಿ ಅವರ ಜೊತೆ ದಿ:9/12/1998 ರಂದು ವಿವಾಹ ಆಗಿರುತ್ತದೆ. ನನ್ನ ಪತ್ನಿಯ ಮಾವನವರು ಅವರ ಸರ್ಕಾರಿ ಸೇವೆಯಿಂದ ಉಳಿತಾಯವಿರುವ ಮೊತ್ತದಿಂದ

ಸ್ವಲ್ಪ ಜಮೀನನ್ನು ಬಕ್ಷೀಸ್‌ಗಾಗಿ ಮಗಳಿಗೆ ನೀಡಬೇಕೆಂದು ನಿರ್ಧರಿಸಿಕೊಂಡಿದ್ದಿರು. ಶ್ರೀಮತಿ.ಬಾಲಾಬಾಯಿ ಕೋಂ ವೆಂಕನಗೌಡ ಪಾಟೀಲ ಅವರಿಗೆ ಚಿಕ್ಕಮಲ್ಲಿಗವಾಡ ಗ್ರಾಮದಲ್ಲಿ ಬ್ಲಾಕ್ ನಂ.195/ಬಿ ರಲ್ಲಿ 14 ಎಕರೆ 10 ಗುಂಟೆ ಜಮೀನು ಹಾಗೂ 2 ಎಕರೆ 8 ಗುಂಟೆ ಜಮೀನು ಸಾಗುವಳಿಯನ್ನು ಹೊಂದಿದ್ದು, ಈ ಎರಡು ಜಮೀನು ಬಾಲಬಾಯಿ ಅವರ ಪತಿಯ ಸಹೋದರನಾದ ಶ್ರೀ.ದೇಸಾಯಿಗೌಡ ಈರನಗೌಡ ಪಾಟೀಲ ಅವರ ಸ್ವಾಧೀನದಲ್ಲಿತ್ತು. ಈ ಎರಡು ಜಮೀನುಗಳನ್ನು ಖರೀದಿಸಿದ್ದು, ಮೆಹಬೂಬ್ ಸಾಬ್ ದಾವಲ್‌ಸಾಬ್ ಕಲಕೇರಿ ಅವರು ಮಾರಾಟದ ಒಪ್ಪಂದ ಮಾಡಿಕೊಂಡುದ್ದು, ಬಾಲಬಾಯಿ ಅವರಿಗೆ ದಿ:29/11/2001ರಂದು ರೂ.1 ಲಕ್ಷ ಪಾವತಿಸಿ ನೋಂದಣಿ ಕರಾರು ಪತ್ರ ಮಾಡಿಕೊಂಡಿದ್ದು, ಜಮೀನುಗಳ ಸ್ವಾಧೀನ ಸಹ ಬರೆಸಿಕೊಂಡಿದ್ದಾರೆ. ದಿ:7/12/2007 ರಂದು ರೂ.2,10,000/-ಅನ್ನು ನೀಡಿ ಒಟ್ಟು ರೂ.3,10,000/-ಪಾವತಿಸಿದ್ದು ಬಾಕಿ ರೂ.1,60,000/-ಗಳನ್ನು ದೇಸಾಯಿ ಗೌಡ ಈರನಗೌಡ ಪಾಟೀಲ್ ಇವರಿಗೆ ದಿ:11/1/2003ರಂದು ಸಂದಾಯ ಮಾಡಿ ಜಮೀನುಗಳ ಸ್ವಾಧೀನವನ್ನು ಬರೆಸಿಕೊಂಡಿರುತ್ತಾರೆ. ಬಾಕಿ ರೂ.30,000/- ಕೊಡುವ ಬಗ್ಗೆ ಕರಾರು ಪತ್ರ ಮಾಡಿಸಿಕೊಂಡಿದ್ದಾರೆ. ನಂತರ ಮೊತ್ತದ ಪಾವತಿಸಿ ಮೆಹಾಬೂಬ್ ಸಾಬ್ ದಾಲವಸಾಬ್ ಕಲಕೇರಿ ಅವರು ಕ್ರಯ ಪತ್ರವನ್ನು ಬರೆಸಿಕೊಂಡಿರುತ್ತಾರೆ. ನಂತರ ಅವರಿಗೆ ಹಣಕಾಸಿನ ತೊಂದರೆ ಆಗಿದ್ದರಿಂದ ಸದರಿ ಜಮೀನನ್ನು ನನ್ನ ಮಾವನವರಾದ ಶಿವಲಿಂಗಪ್ಪ ಭೀರಪ್ಪ ಕುರುಬರ ಅವರು, ಅವರ ಉಳಿತಾಯ ಸಿಂಡಿಕೇಟ್ ಬ್ಯಾಂಕ್, ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜ್ ಕ್ಯಾಂಪಸ್ ವಿದ್ಯಾನಗರ ಬ್ರಾಂಚ್ ಖಾತೆ ಸಂ.90ರಲ್ಲಿ ಚೆಕ್ ಸಂಖ್ಯೆ:806826 ದಿ:10/4/2003 ಮೂಲಕ ರೂ.2,50,000/- ಗಳನ್ನು ಮೆಹಾಬೂಬ್ ಸಾಬ್ ದಾಲವಸಾಬ್ ಕಲಕೇರಿ ಅವರಿಗೆ ಪಾವತಿಸಿ ಬಾಕ್ ನಂ.195/ಬಿ 14 ಎಕರೆ 10 ಗುಂಟೆ ಜಮೀನು ಉತ್ತರ ಭಾಗದ 8 ಎಕರೆ 9 ಗುಂಟೆ ಜಮೀನನ್ನು ಪತ್ನಿ ಸವಿತಾ ರಾಣಿ ಅವರ ಹೆಸರಿಗೆ ಬರೆದುಕೊಡುವಂತೆ ಒಪ್ಪಂದ ಮಾಡಿಕೊಂಡಿದ್ದು, ಹಾಗೂ ಉಳಿದ ದಕ್ಷಿಣ ಭಾಗದ 6 ಎಕರೆ 1 ಗುಂಟೆ ಜಮೀನನ್ನು ಮತ್ತು 2ಎಕರೆ 8 ಗುಂಟೆ ಜಮೀನನ್ನು ಪುಷ್ಪ ಕೋಂ ವಾಗೀಶ್ವರ ಅವರು ಖರೀದಿಸಿದ್ದು ಒಪ್ಪಂದ ಜಂಟಿಯಾಗಿ ಖರೀದಿ ಒಪ್ಪಂದ ಕರಾರು ಪತ್ರ ಆಗಿರುತ್ತದೆ. ಮೆಹಾಬೂಬ್ ಸಾಬ್ ದಾವಲ್ ಸಾಬ್ ಕಲಕೇರಿ ಅವರು ನಮ್ಮ ಮಾವನವರಿಂದ ಪಡೆದುಕೊಂಡು ರೂ.2,50,000/- ಹಾಗೂ ಪುಷ್ಪ ಅವರಿಂದ ರೂ.2,50,000/-, ಬಾಲಬಾಯಿ ಅವರಿಗೆ ರೂ.3,10,000/- ಮತ್ತು ದೇಸಾಯಿಗೌಡ ಈರನಗೌಡ ಪಾಟೀಲ ಅವರಿಗೆ ರೂ.1,50,000/- ಸಂದಾಯ ಮಾಡಿ ಚಿಕ್ಕಮಲ್ಲಿಗವಾಡ ಗ್ರಾಮದ ಬ್ಲಾಕ್ನ ನಂ.195/ಬಿ ಹಾಗೂ ಬ್ಲಾಕ್ ನಂ.196 ಜಮೀನುಗಳು ಪೂರ್ಣ ಸ್ವಾಧೀನ ಮಾಡಿಕೊಡುವಂತೆ ಸದರಿ ಜಮೀನುಗಳು ಬಾಲಬಾಯಿ ಕೋಂ ವೆಂಕನಗೌಡ ಹೆಸರಿನಲ್ಲಿ ಇರುವ ಪ್ರಯುಕ್ತ

ಸದರಿಯವರಿಗೆ ರೂ.5,00,000/- ಸಂದಾಯ ಮಾಡಿರುವುದರಿಂದ ಮೆಹಾಬೂಬ್ ಸಾಬ್ ದಾಲವಸಾಬ್ ಕಲಕೇರಿ ಇವರು ಇಚ್ಛಿಸಿರುವಂತೆ ಬಾಲಬಾಯಿ ಅವರಿಂದ ನಮ್ಮ ಮಾವನವರು ಮಗಳಿಗೆ ಉಡುಗೊರೆಯಾಗಿ ನೀಡಬೇಕೆಂದು ನನ್ನ ಪತ್ನಿಯ ಹೆಸರಿನಲ್ಲಿ 8 ಎಕರೆ 1 ಗುಂಟೆ ಮತ್ತು ಬ್ಲಾಕ್ ನಂ.196ರಲ್ಲಿ 2 ಎಕರೆ 8 ಗುಂಟೆ ಜಮೀನುಗಳನ್ನು ಖರೀದಿ ಕಾಗದ ಪತ್ರ ಮಾಡಿಕೊಡುವಂತೆ ದಿ:10/4/2003ರಂದು ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ. ದಿ:10/4/2003ರಂದು ಗಿಫ್ಟ್ ಡೀಡ್ ಮಾಡಿರುತ್ತಾರೆ. ಪುಷ್ಪ ಕೋಂ ವಾಗೀಶ್ವರ್ ಅವರು ನನ್ನ ಸಂಬಂಧಿಕರು ಅಗಿರುವುದಿಲ್ಲ. ಅವರು ಖರೀದಿಸಿದ ಜಮೀನಿಗೂ ನನಗು ಸಂಬಂಧವಿರುವುದಿಲ್ಲ. ನನ್ನ ಪತ್ನಿ ಸವಿತಾ ರಾಣಿ, ಧಾರವಾಡ ಜಿಲ್ಲಾ ನೋಂದಣಾಧಿಕಾರಿಗಳ ನ್ಯಾಯಾಲಯದಲ್ಲಿ ಹಾಜರಾಗಲು ಜಿ.ಪಿ.ಎ ಬರೆದುಕೊಟ್ಟಿದ್ದು, ನಾನು ಪ್ರಕರಣದಲ್ಲಿ ಹಾಜರಾಗಿರುತ್ತೇನೆ. ನನ್ನ ತಂದೆ ಚನ್ನಬಸಪ್ಪ ಬಸವಲಿಂಗಪ್ಪ ಅಂಟರತಾನಿ ಅವರಿಗೆ ಕೃಷಿ ಜಮೀನಿನಲ್ಲಿ ಬಂದ ಆದಾಯದಿಂದ ನನ್ನ ಪತ್ನಿಗೆ ಜಮೀನು ಖರೀದಿಸಿದ್ದು ರೂ.50,000/-ಗಳನ್ನು ದಿ:10/10/2003ರಂದು ಕೊಟ್ಟಿರುತ್ತಾರೆ. ಸದರಿ ಮೊಬಲಿಗೆ 1 ಎಕರೆ 18 ಗುಂಟೆ ಜಮೀನನ್ನು ಚಿಕ್ಕಮಲ್ಲಿಗವಾಡ ಬ್ಲಾಕ್ ನಂ.201ರಲ್ಲಿ ಖರೀದಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿರುವ ಸರ್ಕಾರದ ಆದೇಶ ದಿ:13/3/2017ರ ಪ್ರಕಾರ ಪ್ರಕರಣ ವಿಚಾರಣಾ ಹಂತದಲ್ಲಿ ಇರುತ್ತದೆ. ಚಿಕ್ಕಮಲ್ಲಿಗವಾಡ ಗ್ರಾಮದ ಬ್ಲಾಕ್ ನಂ.195/ಬಿ ವಿಸ್ತೀರ್ಣ 14 ಎಕರೆ 10 ಗುಂಟೆ ಹಾಗೂ ಬ್ಲಾಕ್ ನಂ.195 ವಿಸ್ತೀರ್ಣ 2 ಎಕರೆ 9 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಲಯದಲ್ಲಿ ಓ.ಎಸ್.113/2013 ಪೆಂಡಿಂಗ್ ಇರುತ್ತದೆ. ತಿಲಕಾಬಾಯಿ ಕೋಂ ವೆಂಕನಗೌಡ ಪಾಟೀಲ ಅವರು ಬಾಲಬಾಯಿ, ವಾಬನಾಯ್ಕ, ಭೀಮನಾಯ್ಕ, ದೇಸಾಯಿನಾಯ್ಕ, ಸವಿತಾರಾಣಿ ಮತ್ತು ಸಂಗೀತಾ ಇವರುಗಳ ವಿರುದ್ದ ಸಲ್ಲಿಸಿದ್ದ ದಾವೆ ವಜಾ ಆಗಿರುತ್ತದೆ.

ನನ್ನ ಪತ್ನಿ ಹೆಸರಿನಲ್ಲಿ ಇರುವ ಕೃಷಿ ಉತ್ಪನ್ನ ಆದಾಯದಿಂದ ಧಾರವಾಡ ಶಹರ ವಾರ್ಡ್ ನಂ.1 ರಾಣಿ ಚೆನ್ನಮ್ಮನಗರ 2 ನೇ ಮುಖ್ಯ ರಸ್ತೆ ಪ್ಲಾಟ್ ನಂ.193 40x60 ರಲ್ಲಿ ವಾಸನ ಮನೆ ನಿರ್ಮಿಸಿಕೊಳ್ಳಲು ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಸಪ್ತಾಪೂರ ಧಾರವಾಡ ಇವರಲ್ಲಿ ರೂ.14.00 ಲಕ್ಷ ಗೃಹ ನಿರ್ಮಾಣದ ಸಾಲ ಪಡೆದು ಕೃಷಿ ಆಯುಕ್ತರು ಬೆಂಗಳೂರು ಇವರಿಂದ ಅನುಮತಿ ಪಡೆದು ನನ್ನ ಪತ್ನಿಯ ಹೆಸರಿನಲ್ಲಿ ವಾಸಕ್ಕೆ ಸ್ವಂತ ಮನೆಯನ್ನು ನಿರ್ಮಿಸಿದೆ. ದೂರುದಾರರು ತಪ್ಪು ಕಲ್ಪನೆ ಮಾಡಿಕೊಂಡು ದೂರು ಸಲ್ಲಿಸಿದ್ದಾರೆ. ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಕೋರಿರುತ್ತಾರೆ ಹಾಗೂ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

4. ಎದುರುದಾರರು ಸಹಾಯಕ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಕಲಘಟಗಿಯಲ್ಲಿ ಕೆಲಸ ನಿರ್ವಹಿಸಿದ್ದು IWMP ಮತ್ತು DPAP ಯೋಜನೆಯಲ್ಲಿ ಸರ್ಕಾರದ ಅನುದಾನವನ್ನು ತಿದ್ದುಪಡಿ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ವಿಚಾರಣೇ ನಡೆಯುತ್ತಿದೆ ಎಂದು ತಮ್ಮ ತಕರಾರಿನಲ್ಲಿ ಒಪ್ಪಿಕೊಂಡಿರುತ್ತಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಕಂಡು ಬರುವು ಅಂಶಗಳೆಂದರೆ,

1. ಕರಾರು ಪತ್ರ ದಿ:29/11/2002ಅನ್ನು ಪರಿಶೀಲಿಸಿದಾಗ ಬಾಲಬಾಯಿ ಕೋಂ ವೆಂಕನಗೌಡ ಪಾಟೀಲ ಅವರು ಮೆಹಾಬೂಬ್ ಸಾಬ್ ತಂದೆ ದಾವಲಸಾಬ್ ಕಲಕೇರಿ ಅವರಿಗೆ ಬ್ಲಾಕ್ ನಂ.195/ಬಿ ಚಿಕ್ಕಮಲ್ಲಿಗವಾಡ ಗ್ರಾಮದಲ್ಲಿ 14 ಎಕರೆ 10 ಗುಂಟೆ ಮತ್ತು ಬ್ಲಾಕ್ ನಂ.196ರಲ್ಲಿ 2 ಎಕರೆ 9 ಗುಂಟೆ ಜಮೀನನ್ನು ಮಾರಾಟ ಮಾಡಲು ಒಪ್ಪಿಕೊಂಡಿರುವುದು ಕಂಡುಬಂದಿರುತ್ತದೆ. ಹಾಗೂ ಸ್ವಾಧೀನವನ್ನು ಕೊಟ್ಟಿರುವುದು ಕಂಡುಬಂದಿರುತ್ತದೆ.
2. ಬಕ್ಸಿಸ್ ಪತ್ರವನ್ನು ಪರಿಶೀಲಿಸಿದಾಗ ಶಿವಲಿಂಗಪ್ಪ ಭೀರಪ್ಪ ಅವರು ಸವಿತಾ ರಾಣಿ ಅವರಿಗೆ 8 ಎಕರೆ 9 ಗುಂಟೆ ಜಮೀನನ್ನು ಬಕ್ಸೀಸ್ ಪತ್ರ ಬರೆದು ಕೊಟ್ಟಿರುವುದು ಕಂಡುಬಂದಿರುತ್ತದೆ. ಬಕ್ಸೀಸ್ ಪತ್ರ ನೋಂದಣಿ ಆಗಿರುವುದಿಲ್ಲ ಹಾಗೂ ದಿ.10/4/2003ರ ಕ್ರಯ ಪತ್ರವನ್ನು ಪರಿಶೀಲಿಸಿದಾಗ ಬಾಲಬಾಯಿ ವೆಂಕನಗೌಡ ಪಾಟೀಲ ಅವರು ಎದುರುದಾರರ ಪತ್ನಿ ಸವಿತಾ ರಾಣಿ ಅವರಿಗೆ 8 ಎಕರೆ 9 ಗುಂಟೆ ಜಮೀನಿನ ಕ್ರಯ ಪತ್ರ ಬರೆದುಕೊಟ್ಟಿರುವುದು ಕಂಡುಬಂದಿರುತ್ತದೆ.
3. ಎದುರುದಾರರು ದಿ:10/12/1997ರಂದು ಕೃಷಿ ಇಲಾಖೆಯಲ್ಲಿ ಸೇವೆಗೆ ಸೇರಿರುವುದು ಕಂಡುಬಂದಿದ್ದು, ಸರ್ಕಾರಿ ಸೇವೆಗೆ ಸೇರಿದ ನಂತರ ಸ್ವತ್ತುಗಳನ್ನು ಅವರ ಪತ್ನಿಯವರ ಹೆಸರಿನಲ್ಲಿ ಖರೀದಿಸಿರುವುದು ಕಂಡುಬರುತ್ತದೆ.
4. ಎದುರುದಾರರು ತಮ್ಮ ಮಾವನವರು ಅವರ ಉಳಿತಾಯದ ಹಣದಿಂದ ತನ್ನ ಪತ್ನಿಗೆ ಬಕ್ಸೀಸ್ ಪತ್ರದ ಮುಖಾಂತರ 8 ಎಕರೆ 9 ಗುಂಟೆ ಜಮೀನನ್ನು ನೀಡಿದ್ದಾರೆ ಎಂದು ಹೇಳಿದ್ದು ಸದರಿ ಜಮೀನನ್ನು ಉಡುಗೊರೆಯಾಗಿ ಪಡೆಯುವ ಮೊದಲು ಇಲಾಖೆಯಿಂದ ಅನುಮತಿ

ಪಡೆದುಕೊಂಡಿರುವುದಿಲ್ಲ ಹಾಗೂ ಮಾವನವರಿಗೆ ವೇತನದಿಂದ ಉಳಿತಾಯದ ಹಣವಿತ್ತು ಎಂಬ ಬಗ್ಗೆ ಬ್ಯಾಂಕ್ ಪಾಸ್‌ಬುಕ್ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

5. ಎದುರುದಾರರು ತಮ್ಮ ತಂದೆ ಚನ್ನಬಸಪ್ಪ ಬಸಲಿಂಗಪ್ಪ ಅಂಟರತಾನಿ ರವರು ತಮ್ಮ ಕೃಷಿ ಆದಾಯದಿಂದ ರೂ.50,000/- ಚಿಕ್ಕಮಲ್ಲಿಗವಾಡ ಗ್ರಾಮದ ಬ್ಲಾಕ್ ನಂ.201ರಲ್ಲಿ 1 ಎಕರೆ 18 ಗುಂಟೆ ಜಮೀನು ಖರೀದಿಸಿಕೊಳ್ಳುವ ಸಲುವಾಗಿ ತನ್ನ ಪತ್ನಿಗೆ ಗಿಫ್ಟ್ ಕೊಟ್ಟಿದ್ದಾರೆ ಎಂದು ಹೇಳಿದ್ದು, ಕುಟುಂಬದವರ ಹೆಸರಿನಲ್ಲಿ ಗಿಫ್ಟ್ ಪಡೆಯುವ ಮೊದಲು ತಮ್ಮ ಇಲಾಖೆಯಿಂದ ಅನುಮತಿ ಪಡೆದುಕೊಂಡ ಬಗ್ಗೆ ದಾಖಲೆಗಳಾಗಲೀ ಅಥವಾ ಅವರ ತಂದೆಯವರಿಗೆ ಕೃಷಿ ಆದಾಯವಿತ್ತು ಎಂದು ತೋರಿಸಲು ದಾಖಲೆಗಳನ್ನಾಗಲೀ ಹಾಜರುಪಡಿಸಿರುವುದಿಲ್ಲ.

6. ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿರುವ ಕೃಷಿ ಉತ್ಪನ್ನ ಆದಾಯದಿಂದ ಧಾರವಾಡ ನಗರ, ವಾರ್ಡ್ ನಂ.1, ರಾಣಿ ಚನ್ನಮ್ಮ ನಗರ, 2ನೇ ಮುಖ್ಯರಸ್ತೆ, ಪ್ಲಾಟ್ ನಂ.193, ವಿಸ್ತೀರ್ಣ 40x60 ಅಡಿಗಳನ್ನು ಖರೀದಿಸಿದೆ ಎಂದು ಹೇಳಿದ್ದು ಆದಾಯವಿತ್ತು ಎಂಬ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

7. ಎದುರುದಾರರು Rule 23(2), 23(3) ಮತ್ತು 3-A of KCS (Conduct) Rules, 1966 ಉಲ್ಲಂಘನೆ ಆಗಿರುವುದು ಕಂಡುಬರುತ್ತದೆ. ಎದುರುದಾರರು ಸರ್ಕಾರಿ ನೌಕರರಾಗಿದ್ದು, ಸರ್ಕಾರಿ ಸೇವೆಗೆ ಸೇರಿದ ನಂತರ ಸ್ವತ್ತುಗಳನ್ನು ಖರೀದಿಸಿ ಕರ್ತವ್ಯಲೋಪ ಎಸಗಿರುವುದು ಕಂಡುಬಂದಿರುತ್ತದೆ.

5. ಗೌರವಾನ್ವಿತರ ದಿನಾಂಕ 18/05/2022 ರ ಆದೇಶದಂತೆ ಕೃಷಿ ಆಯುಕ್ತರು, ದಿನಾಂಕ 27/06/2022 ರಂದು ತಮ್ಮ ವರದಿಯನ್ನು ಸಲ್ಲಿಸಿದ್ದು ಈ ಕೆಳಕಂಡಂತೆ ಇರುತ್ತದೆ:

| ಕ್ರ.ಸಂ. | ವಿವರ | ಷರಾ |
|---|---|---|
| 1. | ಅಧಿಕಾರಿಯವರ ಪತ್ನಿಗೆ ಅವರ ತಂದೆಯವರು ಉಳಿತಾಯದ ಹಣದಿಂದ ಬಕ್ಷೀಸ್ ಪತ್ರದ ಮುಖಾಂತರ 8 ಎಕರೆ 9 ಗುಂಟೆ ಜಮೀನು ಉಡುಗೊರೆಯಾಗಿ ನೀಡಿದ್ದು, ಉಡುಗೊರೆ ಪಡೆಯುವ ಮೊದಲು ಇಲಾಖೆಯಿಂದ ಅನುಮತಿ ಪಡೆದುಕೊಂಡ ಬಗ್ಗೆ | ಉಡುಗೊರೆ ಪಡೆಯುವ ಮೊದಲು ಇಲಾಖಾ ಅನುಮತಿ ಪಡೆದಿರುವುದಿಲ್ಲ. |

| | | |
|---|---|---|
| | ದಾಖಲೆ | |
| 2. | ಅಧಿಕಾರಿಯವರ ಪತ್ನಿಯವರಿಗೆ ಅವರ ಮಾವನವರು ಕೃಷಿ ಆದಾಯದಿಂದ ಚಿಕ್ಕಮಲ್ಲಿಗೆವಾಡ ಗ್ರಾಮದ ಬ್ಲಾಕ್ ನಂ. 201 ರಲ್ಲಿ 1 ಎಕರೆ 18 ಗುಂಟೆ ಜಮೀನು ಖರೀದಿಸಿಕೊಳ್ಳುವ ಸಲುವಾಗಿ ಗಿಫ್ಟ್ ಕೊಟ್ಟಿರುವುದಾಗಿ ಹೇಳಿದ್ದು, ಕುಟುಂಬದವರ ಹೆಸರಿನಲ್ಲಿ ಗಿಫ್ಟ್ ಪಡೆಯುವ ಮೊದಲು ಇಲಾಖೆಯಿಂದ ಅನುಮತಿ ಪಡೆದುಕೊಂಡ ಬಗ್ಗೆ ದಾಖಲೆ | ಉಡುಗೊರೆ ಪಡೆಯುವ ಮೊದಲು ಇಲಾಖಾ ಅನುಮತಿ ಪಡೆದಿರುವುದಿಲ್ಲ. |
| 3. | ಅಧಿಕಾರಿಯವರು ಅವರ ಪತ್ನಿಯ ಹೆಸರಿನಲ್ಲಿ ಖರೀದಿಸಿರುವ ಕೃಷಿ ಉತ್ಪನ್ನ ಆದಾಯದಿಂದ ಧಾರವಾಡ ನಗರದ ವಾರ್ಡ್ ನಂ.1, ರಾಣಿಚೆನ್ನಮ್ಮ ನಗರ, ಪ್ಲಾಟ್ ನಂ.193, 40*60 ಅಡಿ ನಿವೇಶನ ಖರೀದಿಸಿರುತ್ತಾರೆ. ಖರೀದಿಯ ಮೊದಲು ಇಲಾಖೆಯಿಂದ ಅನುಮತಿ ಪಡೆದುಕೊಂಡ ಬಗ್ಗೆ ದಾಖಲೆ | ಖರೀದಿಯ ಮೊದಲು ಇಲಾಖಾ ಅನುಮತಿ ಪಡೆದಿರುವುದಿಲ್ಲ. |
| 4. | ಆಸ್ತಿ ಋಣ ಪಟ್ಟಿಯಲ್ಲಿ ಘೋಷಿಸಿರುವ ಐಹೊಳೆ ಗ್ರಾಮ, ಹುನಗುಂದ ತಾಲ್ಲೂಕಿನಲ್ಲಿ 5 ಎಕರೆ 7 ಗುಂಟೆ ಪಿತ್ರಾರ್ಜಿತ ಆಸ್ತಿ ಮಾಡಿ ಎಸ್.ಎನ್.ತಿಮಾಪುರ ಗ್ರಾಮ, ಬದಾಮಿ ತಾಲ್ಲೂಕು ಇಲ್ಲಿ 7 ಎಕರೆ 22 ಗುಂಟೆ ಖರೀದಿ ಮತ್ತು ಮಾರಾಟ ಮಾಡಲು ಅನುಮತಿ ಪಡೆದುಕೊಂಡ ಬಗ್ಗೆ ದಾಖಲೆ | ಖರೀದಿಗಾಗಿ/ಮಾರಾಟ ಮಾಡಲು ಮೊದಲು ಇಲಾಖಾ ಅನುಮತಿ ಪಡೆದಿರುವುದಿಲ್ಲ. |

ಕೃಷಿ ಆಯುಕ್ತರು ರವರು ವರದಿಯನ್ನು ಪರಿಶೀಲಿಸಿದಾಗ ಎದುರುದಾರರು ಉಡುಗೊರೆ ಪಡೆಯುವ ಮೊದಲು ಇಲಾಖೆಯ ಮೇಲಾಧಿಕಾರಿ ರವರಿಂದ ಪೂರ್ವಾನುಮತಿ ಪಡೆದಿರುವುದಿಲ್ಲ, ಖರೀದಿ ಮಾಡಲು ಅಥವಾ ಮಾರಾಟ ಮಾಡಲು ಸಹ ಇಲಾಖೆಯಿಂದ ಅನುಮತಿ ಪಡೆದಿರುವುದಿಲ್ಲ ಎಂದು ತಮ್ಮ ವರದಿಯನ್ನು ಸಲ್ಲಿಸಿದ್ದು ಎದುರುದಾರರು ದಾಖಲೆಗಳನ್ನು ಹಾಜರುಪಡಿಸುವಲ್ಲಿ ವಿಫಲಗೊಂಡಿರುತ್ತಾರೆ ಮತ್ತು ಎದುರುದಾರರು ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1966 ರ ನಿಯಮ 23(2) ಮತ್ತು 23(3) ಅನ್ನು ಉಲ್ಲಂಘನೆ ಮಾಡಿರುವುದು ಕಂಡುಬರುತ್ತದೆ.

6. ಆದುದರಿಂದ, ಎದುರುದಾರರು ನೀಡಿರುವ ಉತ್ತರಗಳನ್ನು ಪರಿಶೀಲಿಸಿದಾಗ, ಅವರುಗಳ ವಿರುದ್ಧದ ಪ್ರಕರಣವನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣಗಳನ್ನು ತೋರಿಸಿರುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ.

7. ದಾಖಲಾತಿಗಳನ್ನು ಪರಿಶೀಲಿಸಿದಾಗ ಎದುರುದಾರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

8. ಎದುರುದಾರರು ಸಾರ್ವಜನಿಕ/ ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಎಸಗಿರುವುದರಿಂದ ಸದರಿಯವರುಗಳ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದ ಅಡಿ, ಈಗ ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ. ಆದ್ದರಿಂದ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸಬೇಕೆಂದು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

06/9/22

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.